# ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 262(493)
ಸದಸ್ಯರ ಹೆಸರು: ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕಃ 23.09.2020
ಉತ್ತರಿಸುವ ಸಚಿವರು: ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖೆ

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ನಾಗಮಂಗಲದಿಂದ ಶ್ರವಣಬೆಳಗೊಳ ಮುಖ್ಯ ರಸ್ತೆಯ ಕಾಮಗಾರಿ ಪ್ರಾರಂಭವಾಗಿ 1 ವರ್ಷ ಕಳೆದರೂ ಕಾಮಗಾರಿಯು ಅಪೂರ್ಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | • ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ನಾಗಮಂಗಲ-ಶ್ರವಣಬೆಳಗೂಳ ರಸ್ತೆಯು ನಾಗಮಂಗಲ ತಾಲ್ಲೂಕಿನಲ್ಲಿ ಒಂದು ಪ್ರಮುಖ ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ಒಟ್ಟು 22.40 ಕಿಮೀ ಉದ್ದವಿರುತ್ತದೆ. ಈ ಪೈಕಿ 22.40 ಕಿಮೀ ಉದ್ದದಲ್ಲಿ 10.25 ಕಿಮೀ ರಸ್ತೆಯು ಸಂಪೂರ್ಣ ಅಭಿವೃದ್ಧಿಯಾಗಿರುತ್ತದೆ.<br>• ಸರಪಳಿ 10.25 ಕಿಮೀ ರಿಂದ 22.40 ಕಿಮೀವರೆಗೆ ಒಟ್ಟು 12.15 ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಲು ಸರಪಳಿ 10.25 ರಿಂದ 14.75 ಕಿಮೀ ವರಗೆ ರೂ-450.00 ಲಕ್ಷಗಳು ಸರಪಳಿ 14.75 ರಿಂದ 19.60 ಕಿಮೀ ವರಗೆ ರೂ-450.00 ಲಕ್ಷಗಳು ಹಾಗೂ ಸರಪಳಿ 19.60 ರಿಂದ 22.40 ಕಿ.ಮೀ ವರಗೆ ರೂ-200.00 ಲಕ್ಷಗಳು ಹೀಗೆ ಒಟ್ಟಾರೆ ರೂ-1100.00 ಲಕ್ಷಗಳ ಮೊತ್ತದ ಪ್ಯಾಕೇಜ್ ಕಾಮಗಾರಿಗೆ ಅನುಮೋದನೆ ದೊರೆಕಿದ್ದು, ಗುತ್ತಿಗೆದಾರರಿಗೆ ಟೆಂಡರ್ ಆಧಾರದ ಮೇಲೆ ಟೆಂಡರ್ ಗುತ್ತಿಗೆ ಸಂಖ್ಯೆ-435/2018-19 ದಿನಾಂಕ-08.03.2019 ರಂದು ಗುತ್ತಿಗೆ ವಹಿಸಲಾಗಿರುತ್ತದೆ.<br>• ಈ ರಸ್ತೆಯಲ್ಲಿ 10.25 ರಿಂದ 12.50 ಕಿಮೀವರೆಗೆ ಅಂದರೆ ಕೆಂಚಗೋನಹಳ್ಳಿ ಗೇಟ್‌ನಿಂದ ದೊಡ್ಡಬಾಲ ಗ್ರಾಮದವರೆಗೆ ಕಾಮಗಾರಿ ಪ್ರಗತಿಯಲ್ಲಿರುತ್ತದೆ.<br>• ಸದರಿ ರಸ್ತೆಯ ಸರಪಳಿ 10.25 ರಿಂದ 22.40 ಕಿ.ಮೀ ವರಗೆ ರಸ್ತೆ ಕ್ಯಾರೇಜ್‌ವೇ ಸಮೀಪ ಮರಗಳಿದ್ದು ಇವುಗಳನ್ನು ತೆರವುಗೊಳಿಸಬೇಕಿದ್ದು, ಈ ಸಂಬಂಧ ವಲಯ ಅರಣ್ಯಾಧಿಕಾರಿಗಳಿಗೆ ಉಪವಿಭಾಗ ರವರಿಗೆ ಪತ್ರ ಬರೆಯಲಾಗಿದ್ದು, ಅನುಮತಿ ನಿರೀಕ್ಷಿಸಲಾಗುತ್ತಿದೆ.<br>• ಗುತ್ತಿಗೆದಾರರು ಕಾಮಗಾರಿಯನ್ನು ಮಂದಗತಿಯಲ್ಲಿ ನಿರ್ವಹಿಸುತ್ತಿದ್ದುದರಿಂದ ಕುಂಠಿತ ಪ್ರಗತಿಯ ಬಗ್ಗೆ ಸದರಿಯವರಿಗೆ ವಿಭಾಗ ಹಾಗೂ ಉಪ-ವಿಭಾಗಗಳಿಂದ ತಿಳುವಳಿಕೆ ಪತ್ರ ನೀಡಿ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸುವಂತೆ ಈಗಾಗಲೇ ಸೂಚಿಸಲಾಗಿದ್ದು, ವಿಳಂಬಕ್ಕೆ ಸಂಬಂಧಿಸಿದಂತೆ ಗುತ್ತಿಗೆ ರದ್ದತಿಗೊಳಿಸುವ ಕುರಿತು ನಿಯಮಾನುಸಾರ ಕ್ರಮವಹಿಸಲಾಗುವುದು. |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಆ | 2017–18 ರಿಂದ 2019–20 ನೇ ಸಾಲಿನವರೆಗೆ ನಾಗಮಂಗಲ ವಿಧಾನ ಸಭಾ ಕ್ಷೇತ್ರಕ್ಕೆ ಮಂಜೂರಾಗಿರುವ ಕಾಮಗಾರಿಗಳು ಯಾವುವು (ಅಂದಾಜು ಪಟ್ಟಿ ಸಹಿತ ವಿವರ ನೀಡುವುದು) | 2017–18 ರಿಂದ 2019–20ನೇ ಸಾಲಿನ ವರೆಗೆ ನಾಗಮಂಗಲ ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾದ ಕಾಮಗಾರಿಗಳ ಪಟ್ಟಿಯನ್ನು ಅನುಬಂಧ–1ರಲ್ಲಿ ನೀಡಲಾಗಿದೆ. |
| ಇ | ಇದರ ಸಂಬಂಧ ಸಾರ್ವಜನಿಕರು ಸಹಾಯಕ ಕಾರ್ಯಪಾಲಕ ಅಭಿಯಂತರರು, ನಾಗಮಂಗಲ ಉಪ–ವಿಭಾಗ, ನಾಗಮಂಗಲ ಇವರಿಗೆ ಮನವಿ ಸಲ್ಲಿಸಿದರೂ ಈವರೆಗೆ ಕ್ರಮ ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ನಾಗಮಂಗಲ ವಿಧಾನಸಭಾ ಕ್ಷೇತ್ರ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಸ್ಥಳೀಯ ವಿಧಾನ ಪರಿಷತ್ ಸದಸ್ಯರು ಇವರಿಂದ ನಾಗಮಂಗಲ ಉಪ–ವಿಭಾಗಕ್ಕೆ ದಿನಾಂಕ:09.09.2020 ರಂದು ಪತ್ರ ಸ್ವೀಕೃತಗೊಂಡಿದ್ದು, ಪತ್ರಕ್ಕೆ ಸಂಬಂಧಿಸಿದಂತೆ ವಿವರವನ್ನು ಕ್ರೋಢಿಕರಿಸಿ ಶೀಘ್ರವಾಗಿ ನೀಡಲಾಗುವುದು. |
| ಈ | ಈ ಸಂಬಂಧ ಗುತ್ತಿಗೆದಾರರು ಮತ್ತು ಎ.ಇ.ಇ ರವರು ಕಳಪೆ ಕಾಮಗಾರಿ ಜೊತೆಗೆ ಕಾಮಗಾರಿ ವಿಳಂಭ ಮಾಡಿರುವುದಕ್ಕೆ ಕಾರಣರಾಗಿದ್ದು, ಸರ್ಕಾರ ಇವರ ವಿರುದ್ಧ ತೆಗೆದುಕೊಂಡ ಕ್ರಮಗಳೇನು? (ವಿವರವಾದ ಮಾಹಿತಿ ನೀಡುವುದು) | • ಗುತ್ತಿಗೆದಾರರು ಕಾಮಗಾರಿಯನ್ನು ಮಂದಗತಿಯಲ್ಲಿ ನಿರ್ವಹಿಸುತ್ತಿದ್ದ ಹಿನ್ನೆಲೆಯಲ್ಲಿ, ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ಇಲಾಖೆಯಿಂದ ಗುತ್ತಿಗೆದಾರರಿಗೆ ತಿಳುವಳಿಕೆ ಪತ್ರ ನೀಡಲಾಗಿರುತ್ತದೆ.<br>• ಅಲ್ಲದೆ, ಕೋವಿಡ್–19 ಕೊರನಾ ವೈರಸ್ ಪೆಂಡಾಮಿಕ್ ಖಾಯಿಲೆಯ ಹಿನ್ನೆಲೆಯಲ್ಲಿ ಕೆಲಸಗಾರರು ಹಾಗೂ ಸಾಮಗ್ರಿಗಳು ಲಭ್ಯವಿಲ್ಲದೆ ಸುಮಾರು ಆರು ತಿಂಗಳು ಕೆಲಸ ಸ್ಥಗಿತಗೊಂಡಿದ್ದರಿಂದ ಕಾಮಗಾರಿ ವಿಳಂಭವಾಗಿರುತ್ತದೆ.<br>• ಕಾಮಗಾರಿಗಳಿಗೆ ಬಳಸುವ ಸಾಮಗ್ರಿಗಳನ್ನು ಗುಣ ನಿಯಂತ್ರಣ ಉಪ–ವಿಭಾಗದಿಂದ ಗುಣಮಟ್ಟ ಭರವಸೆ ಕಾರ್ಯಕ್ರಮದಂತೆ (QAP) ಸಾಮಗ್ರಿಗಳ ಗುಣಮಟ್ಟವನ್ನು ಕುರಿತು ವಿವಿಧ ಹಂತದ ಪರೀಕ್ಷೆಗಳನ್ನು ನಡೆಸಿ ಗುಣಮಟ್ಟದ ಖಾತರಿಪಡಿಸಿದ ನಂತರವೇ ಕಾಮಗಾರಿಗಳಿಗೆ ಬಳಸಿ, ಕಾಮಗಾರಿಗಳಲ್ಲಿ ಗುಣಮಟ್ಟ ಕಾಯ್ದುಕೊಂಡು ನಿರ್ವಹಿಸಲಾಗಿದೆ. |

ಲೋಇ 66 ಸಿಕ್ಯೂಎನ್ 2020(ಇ)

(ಗೋವಿಂದ ಎಂ. ಕಾರಜೋಳ)
ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ
ಮತ್ತು ಸಮಾಜ ಕಲ್ಯಾಣ ಇಲಾಖೆ